OS No. 25/2017 DW-1

<u>ದಿನಾಂಕ **08.01.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಟಿ ಎ ಎಸ್ ವಕೀಲರಿಂದಃ</u>

1 ಮತ್ತು 2 ನೇ ವಾದಿಯವರ ಯೋಗಕ್ಷೇಮವನ್ನು ಅವರ ತಾಯಿಯೇ ನೋಡಿಕೊಳ್ಳುತ್ತಿದ್ದಾರೆಂದರೆ ಸಾಕ್ಷಿಯು ನಾವು ತಿಂಗಳಿಗೆ 10 ಸಾವಿರ ಹಣ ಕೊಡುತ್ತಿದ್ದೇನೆಂದು ನುಡಿಯುತ್ತಾರೆ. ನಾನು ಮತ್ತು ನನ್ನ ತಾಯಿ ಒಟ್ಟು ಕುಟುಂಬದಲ್ಲಿ ಇದ್ದೆವು ಎಂದರೆ ನಿಜ. ದಾವಾ ಐಟಂ ನಂಬರ್ 4 ಅನ್ನು ನನ್ನ ತಾಯಿ ಒಟ್ಟು ಕುಟುಂಬದಲ್ಲಿ ಇದ್ದಾಗ ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿಯು ಅವರ ತವರು ಮನೆಯ ಹಣದಿಂದ ಖರೀದಿ ಮಾಡಿರುತ್ತಾರೆಂದು ನುಡಿಯುತ್ತಾರೆ. ಈ ಬಗ್ಗೆ ಖರೀದಿ ಪತ್ರದಲ್ಲಿ ನಮೂದು ಇರುವ ಬಗ್ಗೆ ಗೊತ್ತಿಲ್ಲ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸಾಕ್ಷಿಯು ಎಲ್ಲಾ ಆಸ್ತಿಗಳು ಅಲ್ಲ ಎಂದು ನುಡಿಯುುತ್ತಾರೆ. ಆಡು ಕುರಿ ಮೇಯಿಸುತ್ತಿದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ದಾವಾ ಆಸ್ತಿಗಳಲ್ಲಿ ತೆಂಗಿನ ತೋಟ ಇದೆ ಎಂದರೆ ಸುಳ್ಳು. ದಾವಾ ಆಸ್ತಿಯಲ್ಲಿ 8-10 ಲಕ್ಷ ಆದಾಯವಿದೆ ಎಂದರೆ ಸುಳ್ಳು. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ಪಾಲು ಬಗ್ಗೆ ಪಂಚಾಯತಿ ಮಾಡಿದ್ದಾರೆಂದರೆ ಸಾಕ್ಷಿಯು ವಕೀಲರು ನೀವೆ ಬಂದಿದ್ದರಿ ಎಂದು ಹೇಳುತ್ತಾರೆ. ಪಾಲು ಕೊಡುತ್ತೇನೆಂದು ನಾನು ಒಪ್ಪಿಕೊಂಡಿದ್ದೆ ಎಂದರೆ ಸುಳ್ಳು. ನಾನು ದಾವಾ ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನ ಪಟ್ಟಿರುತ್ತೇನೆಂದರೆ ಸುಳ್ಳು. ವಾದಿಗೆ ತೊಂದರೆ ಕೊಡಲು ಭಾಗ ಕೊಡುತ್ತಿಲ್ಲ ಎಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**